# ಭಾರತೀಯ ಸಂಸ್ಕೃತಿಯಲ್ಲಿ ಮಣ್ಣಿನ ಹಬ್ಬಗಳ ಮಹತ್ವ

**ಕೆ.ಎಲ್. ಗುಡಿಮನಿ**

ಕನ್ನಡ ಉಪನ್ಯಾಸಕರು, ದಾನಮ್ಮದೇವಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಿಳಾ ಮಹಾವಿದ್ಯಾಲಯ, ಮುಧೋಳ.

DOI: https://doi.org/10.5281/zenodo.15124158

## ABSTRACT:

ಭರತಭೂಮಿಯನ್ನು ಹಬ್ಬಗಳ ನಾಡು ಎಂದು ಕರೆಯಬಹುದಾಗಿದೆ. ಗ್ರಾಮೀಣ ಹಬ್ಬಗಳ ರಾಷ್ಟ್ರವಾಗಿರುವುದರಿಂದ ಋತುಮಾನ, ಸುಗ್ಗಿ, ಮಳೆ ಮತ್ತು ಹುಣ್ಣಿಮೆಯಂತಹ ದಿನಗಳಲ್ಲಿ ಹಬ್ಬಗಳನ್ನು ಹರುಷದಿಂದ ಆಚರಿಸುವ ಸಂಪ್ರದಾಯ ಇನ್ನೂ ಜೀವಂತವಾಗಿದೆ. ವಿಭಿನ್ನ ಸಂಸ್ಕೃತಿ, ಭಾಷೆ ಮತ್ತು ಧರ್ಮಗಳ ಸಮ್ಮಿಲನಗೊಂಡಿರುವ ಈ ನಾಡಿನಲ್ಲಿ ಕಾಲಮಾನಕ್ಕನುಸಾರ ಇಲ್ಲಿಯ ಜನರು ಮಣ್ಣನ್ನೇ ನಂಬಿ, ಮಣ್ಣೇ ದೇವರೆಂದು ಬಗೆದು ದೈವತ್ವದ ಭಾವದಲ್ಲಿ ಬದುಕುತ್ತಿದ್ದಾರೆ. ಮಣ್ಣಿನೊಂದಿಗೆ ಅವಿನಾಭಾವ ಬಾಂಧವ್ಯ ಹೊಂದಿದಂತಹ ನಮ್ಮ ಜನಪದರು ಕಾರಹುಣ್ಣಿಮೆ, ಗುಳ್ಳವ್ವನ ಪೂಜೆ, ನಾಗರಪಂಚಮಿ, ಗಣೇಶ ಚವತಿ, ಜೋಕುಮಾರ, ವಿಜಯದಶಮಿ, ಶಿಗವ್ವ-ಗೌರವ್ವ, ದೀಪಾವಳಿ, ಭಾರತ ಹುಣ್ಣಿಮೆ, ಶಿವರಾತ್ರಿ, ಹೋಳಿ ಹುಣ್ಣಿಮೆಯಂತಹ ಹಬ್ಬಗಳನ್ನು ಆಚರಣೆಗೈಯುತ್ತಾ ಬಂದಿರುವ ನಾಡಿನ ಭವ್ಯ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರಸ್ತುತ ಲೇಖನ ಪ್ರಚುರಪಡಿಸುತ್ತದೆ.

## KEYWORDS:

ಹೊನ್ನಹುಗ್ಗಿ, ಕೆರ್‍ಯಾಗ, ಆರಿಪತ್ರಿ, ಬನ್ನಿಪತ್ರಿ, ಉತ್ರಾಣಿ, ಗಂಗಾಳ, ಆಯಗಾರರು.

'ಮಣ್ಣನ್ನು ನಂಬಿ ನಾ ಮಣ್ಣಿಂದ ಬದುಕೆನು ಮಣ್ಣೇನೆಗೆ ಮುಂದೆ ಹೊನ್ನು ಮಣ್ಣೇ ಲೋಕದಲ್ಲಿ ಬೆಲೆಯಾದ್ದು'; ಎನ್ನುತ್ತ 'ನಂಬಿ ಕೆಟ್ಟವರಿಲ್ಲವೋ ಮಣ್ಣನ್ನು' ಎಂದು ಹಾಡಿ ಅದರಲ್ಲೇ ಸದ್ಗತಿ ಕಂಡವರು. ಅವರು ಭೂಮಿಗೆ ಕೇವಲ ಹೊಲ ಅಥವಾ ಮಣ್ಣೆಂದು ಬಗೆಯದೆ ಅದು ಜೀವನಾಧಾರವಾದ ತಾಯಿಯೆಂದೇ ನಮಿಸಿರುವರು. ಎಂತಲೇ

**'ಏಳುತಾಲೆ ಎದ್ದು ಯಾರ್‍ಯಾರ ನೆನೆಯಲಿ**
**ಎಳ್ಳು ಜೀರಿಗೆ ಬೆಳೆಯೊಳ ಭೂಮಿ ತಾಯಿನ**
**ಎದ್ದೊಂದು ಗಳಿಗೆ ನೆನೆದೇನ'[1]**

ಎಂದು ಏಳುವವರು ನಾವು. ಭೂಮಿತಾಯಿಯನ್ನು ತಾಯಿ ಎಂದವರು ನಾವು, ಭೂಮಿಯನ್ನು ದೇವಿ ಎಂದವರು ನಾವು, ಭೂದೇವಿಯ ಕೃಪೆಗಾಗಿ ಆರಾಧನೆ ಮಾಡಿದವರು ನಾವು, ಭೂದೇವಿಯ ಅನುಕಂಪ ಆಶೀರ್ವಾದಕ್ಕೆ ಕಾತುರರಾಗಿ

ದೀನರಾಗಿ ಪ್ರಾರ್ಥಿಸಿದವರು ನಾವು, ಭೂಮಿಯನ್ನು ಕೇವಲ ಉತ್ಪಾದನೆಯ ಸಾಧನವಾಗಿ ನಾವು ಕಾಣಲಿಲ್ಲ.

**'ಸಮುದ್ರ ವಸನದೇವಿ ಪರ್ವತ ಸ್ತನ ಮಂಡಿತೇ**
**ವಿಷ್ಣು ಪತ್ನಿ ನಮಸ್ತುಭ್ಯಂ ಪಾದಸ್ಪರ್ಷಂ ಕ್ಷಮಸ್ವಮೇ'[2]**

ಅಂದರೆ ಹಳ್ಳ-ಕೊಳ್ಳ, ನದಿ, ಸಾಗರ, ಬೆಟ್ಟ-ಗುಡ್ಡ, ಪರ್ವತಗಳಿಂದ ಅಲಂಕೃತಳಾದ ವಿಷ್ಣುಪತ್ನಿ ಅವಳ ಗರ್ಭದಲ್ಲಿ ಅನರ್ಘ್ಯ ರತ್ನಗಳು ಸೇರಿ ಎಲ್ಲ ಲವಣಗಳಿವೆ. ಭೂದೇವಿ ಹರಿಸಿದರೆ ಸಾಕು ನಮ್ಮಲ್ಲಿ ಹಾಲಿನಂತೆ ಉಕ್ಕೇರಿಸುತ್ತದೆ. ರೈತರು ಕೃಷಿ ತೋಟಗಾರಿಕೆ, ಹೈನುಗಾರಿಕೆ, ದನ ಸಾಕಾಣಿಕೆ, ಜೇನು ಸಾಕಾಣಿಕೆ, ರೇಷ್ಮೇಹುಳು ಸಾಕಾಣಿಕೆ, ಎರೆಹುಳು ಸಾಕಾಣಿಕೆ, ಕುರಿ ಸಾಕಾಣಿಕೆ ಮಾಡುತ್ತಾ ಅವುಗಳ ದೈವತ್ವ ಕಂಡಿದ್ದಾರೆ. ತಮ್ಮ ಬದುಕಿನೊಂದಿಗೆ ಇರುವ ಪ್ರಾಣಿಗಳನ್ನು ದೈವ ಸ್ವರೂಪವೆಂದು ನಂಬಿ ಜೀವನ ಮಾಡಿದ್ದಾರೆ. ಆ ನಂಬಿಕೆಯಿಂದಲೇ ಅನೇಕ ಜನ ಕೃಷಿಕರು ಸಂಸ್ಕೃತಿಯ ಜೊತೆಗೆ ಸಾಕಷ್ಟು ಅಭಿವೃದ್ಧಿಯನ್ನು ಕೂಡಾ ಸಾಧಿಸಿದ್ದಾರೆ. 'ಹಳ್ಳಿಗಳ ಜೀವನ ಸಂಸ್ಕೃತಿಯ ಪುನರುತ್ಥಾನವೇ ನಿಜವಾದ ಸ್ವರಾಜ್ಯ ಭಾರತದ ಜೀವಜೀವಾಳ' ಎಂಬ ಮಹಾತ್ಮಾ ಗಾಂಧಿಜೀಯವರ ಮಾತು ಮನನೀಯವಾದುದು. ಈ ನಂಬಿಕೆಗಳು ಕೃಷಿಕರ ಬದುಕಿನ ಸರ್ವತೋಮುಖ ಏಳ್ಗೆಗೆ ಪೂರಕವಾಗಿವೆ.

**ಕಾರಹುಣ್ಣಿಮೆ:**

ಬಸವ ಜಯಂತಿಗಾಗಿ ಎತ್ತು, ಹೋರಿ, ಆಕಳುಗಳ ಕೊಂಬು ಸವರಿ, ಗೊರಸುಗಳಿಗೆ ಲಾಳ ಕಟ್ಟಿಸುತ್ತಾರೆ. ಕೊಂಬುಗಳಿಗೆ ವಾರ್ನೀಸ್ ಸವರಿ. ಬಸವಜಯಂತಿ ದಿನ ಜಾನುವಾರಗಳ ಮೈ ತೊಳೆದು, ಪೂಜಿಸಿ, ಚಪಾತಿ ಬಾಳೆಹಣ್ಣುನ್ನು ತಿನಿಸುತ್ತಾರೆ. ಮುಂದೆ ಬರುವ ಕಾರಹುಣ್ಣಿಮೆಯಲ್ಲಿಯೂ ಇಷ್ಟೇ. ಆದರೆ ಹುಣ್ಣಿಮೆಯ ಮನ್ನಾ ದಿನ ಹೊನ್ನಹುಗ್ಗಿ ಆಚರಿಸಿ ಜಾನುವಾರುಗಳನ್ನು ಪೂಜಿಸಿ ಜೋಳ ಕುಟ್ಟಿ ಮಾಡಿದ ಕಿಚಡಿ (ಹೊನ್ನ ಹುಗ್ಗಿ) ತಿನಿಸುತ್ತಾರೆ. ಹುಣ್ಣಿಮೆಯ ದಿನ ಎತ್ತುಗಳನ್ನು ಸಿಂಗರಿಸಿ ಮೆರವಣಿಗೆ ಮಾಡುತ್ತಾರೆ. ಸಂಜೆ ಎತ್ತುಗಳನ್ನು ಓಡಿಸಿ ಕರಿ ಹರಿಯುತ್ತಾರೆ. ಬಿಳಿ ಎತ್ತು ಮುಂದೆ ಬಂದರೆ ಬಿಳಿಜೋಳ ಹೆಚ್ಚು ಬೆಳೆಯುತ್ತದೆಂದೂ, ಕಂದೆತ್ತು ಓಡಿ ಮುಂದೆ ಬಂದರೆ ಮುಂಗಾರಿ ಅಂದಾಜಿಸುತ್ತಾರೆ. ಅಂದು ಮಣ್ಣಿನಿಂದ ಮಾಡಿದ ಎತ್ತು(ಮಣ್ಣೆತ್ತು )ಗಳನ್ನು ಪೂಜಿಸುತ್ತಾರೆ.

ಈ ಬಸವ ಜಯಂತಿ ಹಾಗೂ ಕಾರಹುಣ್ಣಿಮೆಗಳ ಮಧ್ಯದಲ್ಲಿ ಊರಿನ ಸುಖ, ಶಾಂತಿ, ನೆಮ್ಮದಿಗಾಗಿ, ಉತ್ತಮ ಮಳೆ ಬೆಳೆಗಾಗಿ ಪ್ರಾರ್ಥಿಸಲು ಸಾಂಕ್ರಾಮಿಕ ರೋಗಗಳು ಹರಡದಂತೆ ಕಾಪಾಡಲು ಗ್ರಾಮದೇವಿಯ ಪ್ರತ್ಯರ್ಥವಾಗಿ ವಾರಾ ಹಿಡಿಯುತ್ತಾರೆ. ಶುಕ್ರವಾರ ಅಥವಾ ಮಂಗಳವಾರ ಅಥವಾ ಎರಡನ್ನೂ ಐದುವಾರ,

ಹನ್ನೊಂದು ವಾರ ಹೀಗೆ ತಮಗೆ ಅನುಕೂಲವಾದ ವಾರಗಳನ್ನು ಹಿಡಿಯುತ್ತಾರೆ. ವಾರದ ದಿನ ಗಳೆ ಹೂಡುವುದಿಲ್ಲ. ಮನೆಯಲ್ಲಿ ರೊಟ್ಟಿ ಮಾಡುವಂತಿಲ್ಲ. ಬದಲಿಗೆ ಜೋಳದ ಅಥವಾ ಸಜ್ಜೆಯಿಂದ ಮಾಡಿದ ಕಡುಬುಗಳನ್ನು ನೀರಿನಲ್ಲಿ ಕುದಿಸಿ, ನುಚ್ಚು ಅಥವಾ ಅನ್ನದೊಂದಿಗೆ ದೇವರಿಗೆ ನೈವೇದ್ಯ ತೋರಿಸುತ್ತಾರೆ. ಸಣ್ಣ ಮಕ್ಕಳು ಹೊಳೆ, ಹಳ್ಳ ಬಾವಿಯಿಂದ ಸಣ್ಣ ಬಿಂದಿಗೆಗಳಲ್ಲಿ ನೀರು ತಂದು ಊರ ಎಲ್ಲ ದೇವರುಗಳ ಗುಡಿಗೆ ಕಡೇವಾರದಂದು ಗ್ರಾಮದೇವತೆಗೆ ಹೊಸ ಸೀರೆ ಖಣ ಹೊಸ ಬಳೆ ಇಡಿಸಿ, ಹೋತು ಅಥವಾ ಕೋಣದ ಬಲಿ ನೀಡಿ ಆಕೆಯನ್ನು ಸಂತೃಪ್ತ ಪಡಿಸುತ್ತಾರೆ. ಸಾಯಂಕಾಲ ಬೈಲಾಟ, ಗೀ ಗೀ, ಲಾವಣಿ ಪದಗಳನ್ನು ಇಲ್ಲವೇ ಸ್ಥಳೀಯ ಕಲಾವಿದರೇ ಕಲಿತ ನಾಟಕಗಳನ್ನೂ ಆಡುತ್ತಾರೆ. ವಾರ ಹಿಡಿದ ಸಂದರ್ಭದಲ್ಲಿ ಗಂಡನ ಮನೆಗೆ ಹೋದ ಹೆಣ್ಣುಮಕ್ಕಳು ಅಥವಾ ಪರ ಸ್ಥಳಕ್ಕೆ ಹೋದ ಉದ್ಯೋಗಸ್ಥರು ವಾರ ಮುಗಿಯುವ ದಿನ ತಪ್ಪದೇ ಬಂದು ಗ್ರಾಮ ದೇವತೆಗೆ ಕಾಯಿ ಕರ್ಪೂರ ಮಾಡಲೇಬೇಕು. ತಪ್ಪಿದಲ್ಲಿ ಏನಾದರೂ ಅವಘಡಗಳು ಸಂಭವಿಸುತ್ತವೆಂಬ ನಂಬಿಕೆ ಗ್ರಾಮೀಣ ಜನತೆಯದು. ವಾರ ಮುಗಿಸಿ ನಂತರವೇ ಬಿತ್ತನೆ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತದೆ.

**ಗುಳ್ಳವ್ವನ ಪೂಜೆ:**

ಈ ಮಣ್ಣೆತ್ತಿನ ಅಮವಾಸ್ಯೆಯ ನಂತರ ಬರುವಾಕೆ ಗುಳ್ಳವ್ವ. ಪ್ರತಿ ಮಂಗಳವಾರ ಸಣ್ಣ ಮಕ್ಕಳು ಊರ ಸಮೀಪದ ಹೊಲಗಳಿಗೆ ಹೋಗಿ ಪೂಜಿಸಿ ಫಲಾಹಾರದ ನೈವೇದ್ಯ ಹಿಡಿದು ಮಣ್ಣು ತಂದು ನೆನೆಸಿ ಹದವಾಗಿ ಮಿಜ್ಜುತ್ತಾರೆ. ಸಾಯಂಕಾಲ ಒಂದೊಂದು ವಾರ ಒಂದೊಂದು ರೀತಿಯಾಗಿ ಕೊಂತ್ಯವ್ವ, ಗುಳ್ಳವ್ವ, ನೆಡಿಗುಳ್ಳವ್ವ, ಕಪಾಟಗುಳ್ಳವ್ವನನ್ನು ಮಾಡುತ್ತಾರೆ. ಇಲ್ಲಿ ಗಮನಿಸಬೇಕಾದುದೆಂದರೆ ಗುಳ್ಳವ್ವನನ್ನು ಅನ್ನ ಕೊಡುವ ಭೂಮಾತೆಯಾಗಿ ಬಸವಣ್ಣನನ್ನು ಉಳುವ ಶಕ್ತಿಯಾಗಿ, ಶಕ್ತಿದೇವಿಯಾಗಿರುವ ಗುಳ್ಳವ್ವನ ಮುಂದೆ ಸಂಹಾರಗೊಳ್ಳುವ ಕೋಣವನ್ನು ಮಹಿಷಾಸುರನನ್ನಾಗಿಯೂ ಕಲ್ಪಿಸಿಕೊಳ್ಳಬಹುದಾಗಿದೆ. ಸಾಯಂಕಾಲ ಪೂಜೆ ಮಾಡಿ ಮಣ್ಣಿನಿಂದಲೇ ಮಾಡಿದ ಕೋಣವನ್ನು ಕಡಿದು ಎಡೆ ತೋರಿಸುತ್ತಾರೆ. ಮರುದಿನ ಪಕ್ವಾನ್ನ ಕಟ್ಟಿಕೊಂಡು ಹೊಳೆಹಳ್ಳಗಳ ಬಳಿ ಹೋಗಿ ಗುಳ್ಳವ್ವನಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತ ಊಟ ಮಾಡಿ ಬರುತ್ತಾರೆ.

**ನಾಗರ ಪಂಚಮಿ:**

ನಾಗರಪಂಚಮಿಯಂದು ಮಣ್ಣಿನಿಂದ ಮಾಡಿದ ನಾಗಪ್ಪನಿಗೆ ಚವತಿ ಹಾಗೂ ಪಂಚಮಿ ದಿನಗಳಂದು ಮನೆಮಂದಿ ಎಲ್ಲ ಸೇರಿ ಹಾಲೆರೆಯುತ್ತಾರೆ. ಉಂಡಿ, ಕರ್ಚಿಕಾಯಿ, ಹೋಳಿಗೆ ಎಲ್ಲವನ್ನೂ ನಾಗಪ್ಪನಿಗೆ ನೈವೇದ್ಯ ಮಾಡಿ ತಾವೂ

ಸ್ವೀಕರಿಸುತ್ತಾರೆ. ಇಲ್ಲಿ ನಾಗಾರಾಧನೆ ಎಂದರೆ ಈ ಪ್ರಕೃತಿಯಲ್ಲಿ ಎಲ್ಲ ಪಶು ಪಕ್ಷಿಗಳನ್ನು ಗೌರವಿಸಿದರೆ ಅವುಗಳಿಂದ ಎಂದೂ ನಮಗೆ ಕೆಟ್ಟದ್ದಾಗದು ಪ್ರಕೃತಿಯನ್ನು ಪ್ರೀತಿಸು ಪ್ರತಿಯಾಗಿ ಅದೂ ನಿನ್ನನ್ನು ಪ್ರೀತಿಸಿ ನಿಮಗೆ ಒಳ್ಳೆಯದನ್ನು ಮಾಡುತ್ತದೆ ಎಂಬ ಮಾತನ್ನು ಧ್ವನಿಸುತ್ತದೆ. ಭಾರತೀಯರಿಗೆ ಶ್ರಾವಣ ಮಾಸವು ಅತ್ಯಂತ ಪವಿತ್ರ ಮಾಸವಾಗಿರುವುದರಿಂದ ನಮ್ಮ ರೈತಾಪಿ ವರ್ಗ ಮದ್ಯಮಾಂಸಗಳನ್ನು ಸೇವಿಸುವುದಿಲ್ಲ. ಏರಿಳಿತಗಳಿಂದ ಕೂಡಿದ ನಮ್ಮ ಬದುಕು ತೂಗುತ್ತಿರುವ ಜೋಕಾಲಿಯ ಹಾಗೆ ಅನವರತ ನಮ್ಮನ್ನು ಕರುಣಿಸಿ ಕಾಪಾಡೆಂದು ಭಗವಂತನ ಚಿಂತನೆಯಲ್ಲಿ ಕಾಲ ಕಳೆಯುತ್ತಾರೆ. ಪ್ರತಿ ಗ್ರಾಮಗಳ ಓಣಿ ಓಣಿಗಳಲ್ಲಿಯೂ ಭಜನಾ ಮೇಳಗಳು ಸುಶ್ರಾವ್ಯವಾಗಿ ಭಕ್ತಿಯ ಹಾಡುಗಳನ್ನು ಹಾಡುತ್ತಿರುತ್ತಾರೆ. ಶ್ರಾವಣ ಮಾಸದ ಕೊನೆಗೆ ಅನ್ನ ಸಂತರ್ಪಣೆಯೊಂದಿಗೆ ಭಜನೆ ಕಾರ್ಯಕ್ರಮಕ್ಕೆ ಮಂಗಲ ಹಾಡುತ್ತಾರೆ.

**ಗಣೇಶ ಚವತಿ, ಜೋಕಮಾರ:**

ತಮಗೆ ಅನ್ನ ನೀಡುವ ಭೂತಾಯಿಯನ್ನು ಒಕ್ಕಲಿಗರು ಅದನ್ನು ಬರೀ ಮಣ್ಣೆಂದು ಭಾವಿಸುವುದಿಲ್ಲ. ಮಣ್ಣನ್ನು ತಮ್ಮ ಹೃದಯಾಂತರಾಳದಿಂದ ತಾಯಿ ಎಂದೇ ಗೌರವಿಸುತ್ತಾರೆ. ತಾವು ಪೂಜಿಸಿವ ಯಾವದೇ ದೇವರಾಗಲಿ ಅದಕ್ಕೆ ಮಣ್ಣೇ ಮೊದಲೆಂದು ಹೇಳುತ್ತಾರೆ ಹಾಗೆಯೇ ಇಷ್ಟದೇವರಾದ ಗಣಪತಿ, ಜಾನಪದ ದೇವರಾದ ಜೋಕಾಮಾರ ಸಿದ್ಧಗೊಳ್ಳುವುದು ಮಣ್ಣಿನಿಂದಲೇ ಗಣಪತಿಗೆ ಅದ್ದೂರಿಯ ಪೂಜೆಯೊಂದಿಗೆ ಪಕ್ವಾನ್ನಗಳ ನೈವ್ಯದ್ಯವಾದರೆ, ಜೋಕುಮಾರನನ್ನು ಬುಟ್ಟಿಯಲ್ಲಿಟ್ಟು ಬೇವಿನ ಸೊಪ್ಪಿನ ಹಾರದೊಂದಿಗೆ ಮೆರವಣಿಗೆ; ಕೊನೆಗೆ ಕೇರಿಯಲ್ಲಿ ದುರ್ಮರಣ ಕೇರ್‍ಯಾಗ ಉಳಿಲಿಲ್ಲ"[3] ಎಂಬ ನಮ್ಮ ಜಾನಪದರ ಮಾತು ನಿತ್ಯ ಸತ್ಯ.

**ವಿಜಯದಶಮಿ:**

ಮಹಾಲಯ ಅಮವಾಸ್ಯೆಯ ಮರುದಿನದಿಂದ ವಿಜಯದಶಮಿವರೆಗೂ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಶಕ್ತಿಯ ಆರಾಧನೆ ನಡೆಯುತ್ತದೆ ಮತ್ತು ಉಪವಾಸವಿರುತ್ತಾರೆ. ದೇವಿ ಪುರಾಣದ ಪಾರಾಯಣ ಮಾಡುತ್ತಾರೆ. ಆಯುಧ ಪೂಜೆಯ ದಿನದಂದು ಕೃಷಿಗೆ ಸಂಬಂಧಿಸಿದ ಎಲ್ಲ ಉಪಕರಣಗಳನ್ನು ತೊಳೆದು ಜೋಳದ ದಂಟಿನ ಹಂದರಗಳ ಕೆಳಗೆ ಚೆಂಡು ಹೂವು, ಆರಿಪತ್ರಿ ಬನ್ನಿಪತ್ರಿಯನ್ನಿಟ್ಟು ಪೂಜೆ ಮಾಡಿ ನೈವೇದ್ಯ ತೋರಿಸುತ್ತಾರೆ. ವಿಜಯದಶಮಿಯಂದು ಬನ್ನಿಗಿಡಕ್ಕೆ ಪೂಜೆ ಸಲ್ಲಿಸಿ ಸಾಯಂಕಾಲ ಬನ್ನಿ ಬಂಗಾರವನ್ನು ವಿನಿಮಯ ಮಾಡಿಕೊಳ್ಳುತ್ತಾರೆ.

**ಶಿಗವ್ವ ಗೌರವ್ವ:**

ವಿಜಯದಶಮಿಯಂದು ಸಾಯಂಕಾಲ ಮಠಗಳಲ್ಲಿ, ಗುಡಿಯಲ್ಲಿ

ಧರ್ಮಶಾಲೆಗಳಲ್ಲಿ ಬಾಲಕಿಯರು ಪ್ರತಿಷ್ಠಾಪಿಸುತ್ತಾರೆ. ನಿತ್ಯವೂ ಅವರೆ ಹೂವು, ಹೊನ್ನಹೂವು, ಚೆಂಡುಹೂವೂ ಆರತಿ ತಟ್ಟೆಯಲ್ಲಿ ತುಂಬಿಕೊಂಡು ಆರತಿ ಬೆಳಗಿ ಹೂವು ಸಮರ್ಪಿಸಿ ಬರುತ್ತಾರೆ. ಹುಣ್ಣಿಮೆಯ ದಿನ ಸಕ್ಕರೆ ಗೊಂಬೆಗಳನ್ನಿಟ್ಟು ಆರತಿ ಬೆಳಗಿ ಬರುತ್ತಾರೆ. ಆರತಿ ಬೆಳಗಿ ತಿರುಗಿ ಬರುವಾಗ ಮನೆಯ ಮುಖ್ಯ ಬಾಗಿಲಿನ ಹೊಸ್ತಿಲಿಗೂ, ಗ್ವಾದಲಿಯಲ್ಲಿಯ ಆಕಳಿಗೂ, ಎತ್ತುಗಳಿಗೂ, ಗುಡಿಯಲ್ಲಿರುವ ಲಕ್ಷ್ಮೀದೇವಿಗೂ ಆರತಿ ಬೆಳಗುತ್ತಾರೆ. ಹುಣ್ಣಿಮೆಯ ದಿನ ರಂಧ್ರ ಕೊರೆದ ಮಣ್ಣಿನ ಕೊಡಗಳಲ್ಲಿ ದೀಪ ಹಚ್ಚಿ ವಾದ್ಯ ವೈಭವದೊಂದಿಗೆ ಕೆರೆ, ಹೊಲ, ಹಳ್ಳಗಳಲ್ಲಿ ತೇಲಿಸಿ ಬರುತ್ತಾರೆ. ಮುಂದೆ ಶುಭದಿನದಂದು ಗೌರವ್ವ ಶೀಗವ್ವನನ್ನು ಹೊಳೆಗೆ ಕಳಿಸುತ್ತಾರೆ.

**ದೀಪಾವಳಿ:**

ಅಶ್ವಿಜ ಮಾಸದ ಕೃಷ್ಣಪಕ್ಷದ ತ್ರಯೋದಶಿಯಂದು ನೀರು ತುಂಬುವ ಹಬ್ಬ ಭರಮನ ಹಬ್ಬ ದೀಪಾವಳಿ ಪ್ರಾರಂಭಗೊಳ್ಳುತ್ತದೆ. ನಿತ್ಯ ಬಳಸುವ ನೀರಿನ ಪಾತ್ರೆಗಳಿಗೂ ಅಂದು ಗೌರವ. ನೀರು ತುಂಬಿದ ಪಾತ್ರೆಗಳನ್ನು ವಿಭೂತಿ ಕುಂಕುಮವಿಟ್ಟು, ಚಂಡು ಸೇವಂತಿಗೆ ಹೂವಿಟ್ಟು ಪೂಜಿಸಿ ನೈವೇದ್ಯ ಸಮರ್ಪಿಸುತ್ತಾರೆ. ಮರುದಿನ ನರಕ ಚತುರ್ದಶಿ ಎಲ್ಲರೂ ಅಭ್ಯಂಜನ ಸ್ನಾನ ಮಾಡಿ ಸೋದರಿಯರಿಂದ ಆರತಿ ಮಾಡಿಸಿಕೊಂಡು ಅವರಿಗೆ ಕಾಣಿಕೆ ಕೊಟ್ಟು ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಅಂದೇ ಬೆಳಗ್ಗೆ ಮನೆಯ ಮುಖ್ಯ ದ್ವಾರದಿಂದ ಹಿಡಿದು ದೇವರ ಮನೆಯ ಬಾಗಿಲಿನವರೆಗೂ ಸಗಣಿಯಿಂದ ಮಾಡಿದ ಪಾಂಡವರ ಪ್ರತಿಷ್ಠಾಪನೆ ಗ್ವಾದಲಿಯಲ್ಲಿ ಜೋಳದ ದಂಟಿನ ಹಂದರ ಹಾಕಿ ಅಲ್ಲಿಯೂ ಪ್ರತಿಷ್ಠಾಪನೆ ಚೆಂಡು ಹೂ ಉತ್ರಾಣಿ, ಹೊನ್ನೆಹೂವು, ಅವರೆ ಹೂವಿನ ಅಲಂಕಾರ. ಪಾಂಡವರು ವನವಾಸದ ಸಂದರ್ಭದಲ್ಲಿ ಅನುಭವಿಸಿದ ನೋವು ನಲಿವುಗಳ ಸಾಮಾನ್ಯ ಮಾನವರಂತೆ ಬದುಕಿ ಅವರ ಕಟ್ಟಿಗೆ ತರುವ, ಕುಟ್ಟು ಬೀಸುವ, ಜಾನುವಾರುಗಳನ್ನು ಮೇಯಿಸುವ, ಜೋಕಾಲಿ ಜೀಕುವ ಹೀಗೆ ಎಲ್ಲ ಘಟನಾವಳಿಗಳನ್ನು ಚಿತ್ರಿಸಿರುವ ನಮ್ಮ ಗ್ರಾಮೀಣ ಜನತೆಯ ಕಲಾ ಚತುರತೆ ನಿಜಕ್ಕೂ ಮೆಚ್ಚುವಂತಹದು. ಅಮವಾಸ್ಯೆಯ ಲಕ್ಷ್ಮೀ ಪೂಜೆ, ಸರಸ್ವತಿಯ ಪೂಜೆ ಎರಡೂ ದಿನಗಳಂದು ತಮ್ಮ ಅಂಗಡಿಗಳನ್ನು ಸಿಂಗರಿಸಿ ತಮ್ಮ ಖಾತೆ ಕಿರ್ದಿಗಳನ್ನಿಟ್ಟು ಪೂಜಿಸುತ್ತಾರೆ. ಮುತ್ತೈದೆಯರಿಗೆ ಮಾಡುತ್ತಾರೆ. ಪ್ರತಿಪದೆಯ ದಿನ ಹೊಸ ಖಾತೆ ಪುಸ್ತಕಗಳನ್ನಿಟ್ಟು ಶ್ರೀಕಾರ ಬರೆದು ಹೊಸ ವರ್ಷಕ್ಕೆ ಪ್ರವೇಶ ಮಾಡುತ್ತಾರೆ. ಮಧ್ಯಾಹ್ನ ಪಾಂಡವರ ಮುಂದೆ ಇಟ್ಟು ಬೇಯಿಸಲಾದ ಅನ್ನದ ಸಣ್ಣ ಗಿಂಡಿಯನ್ನು ಹೊಲಕ್ಕೊಯ್ದು ಚರಗ ಚಲ್ಲಿ ಬರುತ್ತಾರೆ. ಮೇಯಲು ಹೋದ ದನಕರುಗಳು ಸಾಯಂಕಾಲ ಮನೆಗೆ ಬರುವುದರೊಳಗಾಗಿ ಪಾಂಡವರನ್ನು ಮನೆಯ ಕುಂಬಿಯ ಮೇಲೆ ಒಯ್ದು ಇಟ್ಟು ಬಿಡುತ್ತಾರೆ. ಸಾಯಂಕಾಲ ಊರಿನ ಎಲ್ಲ ದೇವರ ಗುಡಿಗಳಲ್ಲಿ ಕಾರ್ತಿಕ ದೀಪ

ಹಚ್ಚುತ್ತಾರೆ. ಅಂದು ಪ್ರಾರಂಭಗೊಂಡ ಕಾರ್ತಿಕದ ದೀಪವು ಕಾರ್ತಿಕಮಾಸ ಮುಗಿದ ನಂತರ ಆಯಾ ಊರಿನ ಮುಖ್ಯ ದೇವರುಗಳ ವಾರಾ ನೋಡಿಕೊಂಡು ಕಾರ್ತಿಕ ಇಳಿಸುತ್ತಾರೆ. ಈ ಸಂದರ್ಭದಲ್ಲಿ ಕುಸ್ತಿ, ಹಗ್ಗ ಜಗ್ಗುವ, ಟಗರಿನ ಕಾದಾಟ, ಕಬ್ಬಡ್ಡಿ, ಸಂಗ್ರಾಣಿ ಕಲ್ಲು ಎತ್ತುವ ಶಕ್ತಿ ಪ್ರದರ್ಶನ ಹಾಗೂ ಮನರಂಜನೆಗಾಗಿ ಬೈಲಾಟ ನಾಟಕ ಏರ್ಪಡಿಸುತ್ತಾರೆ. ನೆಂಟರಿಷ್ಟರು, ಬಂಧು ಬಾಂಧವರನ್ನು ಕರೆಸಿ ಹಬ್ಬದ ಸಂತೋಷ ಹಂಚಿಕೊಳ್ಳುತ್ತಾರೆ.

**ಭಾರತ ಹುಣ್ಣಿಮೆ:**

ದೇವ್ರ ಕರೆದಕೊಳ್ಳುವ ಹಬ್ಬ ಭಾರತ ಹುಣ್ಣಿಮೆ ಇನ್ನೊಂದು ದಿನಗಳಿರುವಾಗಲೇ ಮಹಿಳೆಯರು ತಮ್ಮ ಮನೆ ಬಾಗಿಲುಗಳ ಮುಂದೆ ಸಂಜೆ ಹೊತ್ತು ರಂಗವಲ್ಲಿ ಬಿಡಿಸುತ್ತಾರೆ. ರಂಗವಲ್ಲಿಯಲ್ಲಿ ಸೂರ್ಯಚಂದ್ರ, ನಕ್ಷತ್ರಗಳು, ಹಾವು, ಚೇಳು, ಒಂದು ಜೊತೆ ಹೆಜ್ಜೆ ಗುರುತುಗಳಿರುತ್ತದೆ. ಪ್ರತಿಯೊಂದರಲ್ಲಿಯೂ ದೇವರನ್ನೂ ಗುರುತಿಸಿಕೊಳ್ಳುವ ಮುಗ್ಧ ಭಕ್ತಿ ನಮ್ಮ ಗ್ರಾಮೀಣ ಜನತೆಯದು. ಪ್ರಕೃತಿಯ ಮಡಿಲಲ್ಲಿ ಹಗಲು ರಾತ್ರಿ ಎನ್ನದೆ ದುಡಿಮೆಗಿಳಿದಿರುವ ರೈತ ಹಾವು ಚೇಳುಗಳಂತಹವುಗಳಿಂದ ತೊಂದರೆಯಾಗಬಾರದೆಂದು ಅವುಗಳನ್ನು ಕೂಡಾ ಇಲ್ಲಿ ಆರಾಧಿಸುತ್ತಾರೆ. ನಮ್ಮನ್ನು ನಿಯಂತ್ರಿಸುವ ಶಕ್ತಿ ಹೊಂದಿರುವ ಸೂರ್ಯಚಂದ್ರ ನಕ್ಷತ್ರಗಳಿಗೂ ಪೂಜಿಸುವುದರಿಂದ ಭಕ್ತಿ ಸಮರ್ಪಣೆ ಆ ಊರಿನ ಸತ್ಪುರುಷನ ಹೆಜ್ಜೆ ಗುರುತಿಗೂ ನಮನ. ಹುಣ್ಣಿಮೆಗೂ ಮುನ್ನಾ ದಿನ ದೇವ್ರು ಕರಕೊಳ್ಳು ಹಬ್ಬ. ಗಣಪತಿಗೆ ಪ್ರಾಯವಾದ ಎಕ್ಕೆ ಹೂವು ಮಹಾಂಕಾಳಿಯ ರೂಪದಲ್ಲಿರುವ ಬನ್ನಿ ಪತ್ರೆಯೊಂದಿಗೆ ಹಿಂಗಾರಿ ಹಂಗಾಮು ಬೆಳೆದಿರುವ ಎಲ್ಲ ಬೆಳಗಳ ತೆನೆಗಳನ್ನು ಗೊಂಚಲ ಮಾಡಿ ದೇವರ ಜಗುಲಿಯ ಮುಂದೆ ಹಾಗೂ ಮನೆಯ ಮುಖ್ಯ ಬಾಗಿಲಿಗೂ ಕಟ್ಟಿ ಪೂಜಿಸುತ್ತಾರೆ. ಮನೆಯ ಬಾಲಕನೊಬ್ಬ ಗಂಗಾಳ ಬಾರಿಸುತ್ತ ಮನೆಯ ಒಳಗಿನಿಂದ "ಒಳಗಿನ ದೇವ್ರು ಹೊರಗೆ ಹೊರಗಿನ ದೇವ್ರು ಒಳಗೆ"[4] ಎಂದು ಕೂಗುತ್ತಾ ಢಣಢಣ ಗಂಗಾಳ ಬಾರಿಸುತ್ತ ಬರುತ್ತಾನೆ. ಇಲ್ಲಿ ಗಮನಿಸಬೇಕಾದುದೆನೆಂದರೆ ಹಿಂಗಾರಿ ಹಂಗಾಮಿನ ಸುಗ್ಗಿ ಮುಗಿದು ಕಾಳು ಕಡಿಗಳು ಮನೆಗೆ ಬಂದಿರುತ್ತವೆ. ಅವು ಕೃಷಿಕರಿಗೆ ಬರೀ ಕಾಳುಕಡಿಗಳಲ್ಲ. ಅವು ಧಾನ್ಯಲಕ್ಷ್ಮೀ ದೇವತೆ. ಹೊಸ ಧಾನ್ಯ ತಂದು ಹಾಗೆ ಬಳತ ಹಾಗೂ ಹಗೇವುಗಳಲ್ಲಿ ಹಳೆಯ ಧಾನ್ಯದೊಡನೆ ಸೇರಿಸಿದರೆ ಅವು ಕೆಟ್ಟು ಹೋಗುವ ಅಪಾಯ ಉಂಟು. ಹಾಗಾಗದಂತೆ ಮಾಡಲು ಮೊದಲಿನ ಹಳೆಯ ಕಾಳುಕಡಿಗಳನ್ನು ಹೊರ ತೆಗೆದು ಮನೆ ಬಳಕೆಗೆ ಮತ್ತು ಕೂಲಿನಾಲಿ ಮಾಡುವವರಿಗೆ ಕೊಟ್ಟು ಹೆಚ್ಚಿಗಿದ್ದರೆ ಮಾರಾಟ ಮಾಡುತ್ತಾರೆ. ಹೊಸ ಧಾನ್ಯಗಳನ್ನು ಬಳತ ಹಾಗೂ ಹಗೇವುಗಳಲ್ಲಿ ಸಂಗ್ರಹಿಸುತ್ತಾರೆ. ಹೀಗಾಗಿ ನಮ್ಮ ಹಳ್ಳಿಗರಿಗೆ ಹಳೆಯ ಧಾನ್ಯಗಳು ಒಳಗಿನ ದೇವರು, ಹೊಸ ಧಾನ್ಯಗಳು ಹೊರಗಿನ ದೇವರುಗಳಾಗಿ ಅನ್ನ ಪರಬ್ರಹ್ಮ, ಅನ್ನದೇವರಿಗಿಂತ ಇನ್ನು ದೇವರಿಲ್ಲ

ಎಂದು ಗೌರವಿಸಲ್ಪಡುತ್ತವೆ. ಹುಣ್ಣಿಮೆಯ ದಿನ ಹೋಳಿಗೆ ಹುಣ್ಣಿಮೆಯೂಟ. ಸಂಜೆ ಎಲ್ಲರೂ ಮನೆಯ ಗೋಡೆಗಳ ಮೇಲೆ ಕೆಮ್ಮಣ್ಣು ಹಾಗೂ ಸುಣ್ಣದಿಂದ ತೇರಿನ ಚಿತ್ರ ಬರೆಯುತ್ತಾರೆ. ತೇರಿನಲ್ಲಿ ಜಗನ್ನಿಯಾಮಕನಾದ ಈಶ್ವರನ ಚಿತ್ರ. ಯುಗಾದಿ ಪ್ರತಿಪದೆಯಿಂದ ಪ್ರಾರಂಭಗೊಂಡು ಮುಂಗಾರಿ ಹಿಂಗಾರಿಯ ಎರಡು ಹಂಗಾಮುಗಳನ್ನು ಸುಸೂತ್ರವಾಗಿ ಮುಗಿಸಲು ಅಶೀರ್ವದಿಸಿದ ಭಗವಂತನನ್ನೂ ರಥದಲ್ಲಿ ಕುಳ್ಳರಿಸಿ ಸೀಮೋಲ್ಲಂಘನೆ ಮಾಡಿಸಿ ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವೆನ್ನುತ್ತಾರೆ ನಮ್ಮ ರೈತಾಪಿ ಜನ.

**ಶಿವರಾತ್ರಿ-ಹೋಳಿಹುಣ್ಣಿಮೆ:**

ಮಹಾಶಿವರಾತ್ರಿ ಶಿವನ ಆರಾಧನೆಯ ಪವಿತ್ರ ಹಬ್ಬ. ಉಪವಾಸವಿದ್ದು ಶಿವಲಿಂಗಕ್ಕೆ ಅಭಿಷೇಕ ಮಾಡಿ ಉತ್ರಾಣಿ ಕಡ್ಡಿ ಹೊಸ ಹತ್ತಿ ಅರಳೆ ಸುತ್ತಿ ಎಣ್ಣೆಯಲ್ಲಿ ಅದ್ದಿ ದೀಪ ಹಚ್ಚಿ ಬೆಳಗುತ್ತಾರೆ. ಅಂದು ಶಿವದೇವಾಲಯಗಳಲ್ಲಿ ಶಿವನಾಮ ಸ್ಮರಣೆಯೊಂದಿಗೆ ಜಾಗರಣೆ ಮಾಡುತ್ತಾರೆ. ಮುಂದೆ ಹದಿನೈದು ದಿನಕ್ಕೆ ಹೋಳಿ ಹುಣ್ಣಿಮೆ. ಚಿಕ್ಕಮಕ್ಕಳು ಅವರಿವರ ಮನೆಯಿಂದ ತುಡುಗು ಮಾಡಿ ಸಂಗ್ರಹಿಸಿದ ಕುಳ್ಳು ಕಟ್ಟಿಗೆಗೆಳನ್ನು ಹುಬ್ಬಾ ನಕ್ಷತ್ರದಲ್ಲಿ ಕಾಮದಹನ ಮಾಡುತ್ತಾರೆ. ನಮ್ಮಲ್ಲಿರುವ ದುರಾಸೆಗಳನ್ನು ಕಾಮಾಸೆಗಳನ್ನು ಸುಟ್ಟು ಹಾಕುವುದೇ ಕಾಮದಹನವೆಂದು ಹಿರಿಯರು ಹೇಳುತ್ತಾರೆ. ಬಣ್ಣದೋಕುಳಿಯೊಂದಿಗೆ ಹೋಳಿ ಹಬ್ಬ ಮುಕ್ತಾಯಗೊಳ್ಳುತ್ತದೆ. ರಾಶಿ ಮುಗಿಸಿ ಹೊಸ ಗೋದಿಕಾಳು ಬಂದಿದ್ದರೂ ವಿಶ್ವಕರ್ಮ ಬಾಂಧವರು (ಆಯಗಾರರು) ಹೊಸ ಗೋದಿಯನ್ನು ಬಳಸುವುದಿಲ್ಲ. ಏನಿದ್ದರೂ ಅವರು ಯುಗಾದಿ ಪ್ರತಿಪದೆಯಂದು ತಮ್ಮ ಕುಲದೇವರಾದ ಕಾಳಿಕಾ ಮಾತೆಗೆ ಗೋದಿಯ ನಿಧಿ ಸಮರ್ಪಿಸುವುದರೊಂದಿಗೆ ಹೊಸ ವರ್ಷವನ್ನು ಪ್ರಾರಂಭಿಸುತ್ತಾರೆ. ಈ ಸಂದರ್ಭದಲ್ಲಿ ಅವರ ಬಡಿಗಸಾಲೆ, ಕಂಬಾರಸಾಲೆ, ಪತ್ತಾರಸಾಲೆ ಎಲ್ಲವುಗಳಿಗೂ ವಿಶ್ರಾಂತಿ. ಹಾಗಾಗಿ ಕೃಷಿ ಉಪಕರಣಗಳ ತಯಾರಿ, ದುರಸ್ತಿ ಕಾರ್ಯ ಎಲ್ಲವುಗಳಿಗೂ ವಿಶ್ರಾಂತಿ ಎಂದೇ ಹೇಳಬೇಕು. ಹೋಳಿ ಹುಣ್ಣಿಮೆಯ ನಂತರ ಮುಂದೆ ಹದಿನೈದು ದಿನಕ್ಕೆ ಮತ್ತೆ ಯುಗ ಯುಗ ಕಳೆದರೂ ಯುಗಾದಿ ಮರಳಿ ಬರುತಿದೆ ಎಂದು ಹಾಡು ಹೇಳುತ್ತಾ ಚೈತ್ರದ ವಸಂತನನ್ನು ಸ್ವಾಗತಿಸುತ್ತಾರೆ.

ಹೀಗೆ ಭಾರತೀಯ ಸಂಸ್ಕೃತಿಯಲ್ಲಿ ಮಣ್ಣಿನ ಜೊತೆ ಮಾಡುವ ಹಬ್ಬಗಳ ಆಚರಣೆ ಇಂದು ಆಧುನಿಕ ಜೀವನ ಶೈಲಿಯ ವಿಧಾನದಿಂದ ಸ್ವಲ್ಪ ಬದಲಾವಣೆಯಾಗಿರಬಹುದು. ಆದರೂ ಇಂದಿಗೂ ಕೂಡ ಗ್ರಾಮೀಣ ಭಾಗಗಳಲ್ಲಿ ಈ ಹಬ್ಬಗಳ ಆಚರಣೆಯನ್ನು ನೋಡಬಹುದು. ಪಟ್ಟಣಗಳಲ್ಲಿ ಈ ಹಬ್ಬಗಳನ್ನು ಆಚರಿಸಲು ಕೂಡ ಯುಗಾದಿಗೆ ಬೇವು-ಬೆಲ್ಲ, ಗಣೇಶನ ಹಬ್ಬಕ್ಕೆ ಗರಿಕೆ,

ಕಾರಹುಣ್ಣಿಮೆಗೆ ಎತ್ತುಗಳು, ಗುಳ್ಳವ್ವನ ಹಬ್ಬಕ್ಕೆ ಗುಳ್ಳವ್ವ ಇವೆಲ್ಲ ಬೇಕೆಬೇಕು. ಹಾಗೆಂದ ಮಾತ್ರಕ್ಕೆ ಇವತ್ತು ಪ್ಲಾಸ್ಟಿಕ್ ಯುಗವಿರುವುದರಿಂದ ಈ ಎತ್ತುಗಳನ್ನು ಗುಳ್ಳವ್ವನನ್ನು ಜೋಕುಮಾರನನನ್ನು ಪ್ಲಾಸ್ಟಿಕ್‌ದಿಂದ ಮಾಡಿದ ಉದಾಹರಣೆಗಳಿಲ್ಲ. ಇದೇ ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಎತ್ತಿ ಹೇಳುತ್ತದೆ. ಏನೆ ಆದರೂ ನಮ್ಮ ಮಣ್ಣಿನ ಮಹತ್ವ ಸಾರುವ ಇಂತಹ ಹಬ್ಬಗಳ ವಿಶೇಷತೆಗಳನ್ನು ನಮ್ಮ ಮುಂದಿನ ತಲೆಮಾರಿಗೆ ತಿಳಿಸಿ ಹೇಳುವ ದೊಡ್ಡ ಜವಾಬ್ಧಾರಿ ನಮ್ಮೆಲ್ಲರ ಮೇಲಿದೆ.

**ಕೊನೆ ಟಿಪ್ಪಣಿಗಳು:**

1. ಹಲಸಂಗಿ ಮಧುರಚೆನ್ನರು ಮತ್ತು ಗೆಳೆಯರು (ಸಂ), (1990), ಗರತಿಯ ಹಾಡು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪು.ಸಂ. 49
2. ಯಜ್ಞನಾರಾಯಣ ಉಡುಪ, (2003), ಭಾರತ ಚೂಡಾಮಣಿ, ಜನಪ್ರೀಯ ಪುಸ್ತಕ ಮಾಲೆ, ಬೆಂಗಳೂರು, ಪು.ಸಂ. 217
3. ಪ್ರಕಾಶ ಖಾಡೆ, (2024), ಗ್ರಾಮ್ಯ, ಖಾಡೆ ಪ್ರಕಾಶನ, ಬಾಗಲಕೋಟೆ, ಪು.ಸಂ. 153
4. ಅಂಬಳಿಕೆ ಹಿರಿಯಣ್ಣ, (2001), ನಮ್ಮ ಜಾನಪದ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ಪು.ಸಂ. 116

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.